## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 161/ 2017

**ಚಾಸಾ ಃ- 07 / ಪ್ರಾಸಾ ಃ- 04**

| | |
|---|---|
| ಹೆಸರು | ಮುನಿರಾಜು |
| ತಂದೆ ಹೆಸರು | ಮುನಿಯಪ್ಪ |
| ವಯಸ್ಸು | 43 |
| ಉದ್ಯೋಗ | ವೆಲ್ಡಿಂಗ್ ಕೆಲಸ |
| ವಿಳಾಸ | ಮಂಚನಬೆಲೆ |

**ದಿನಾಂಕಃ 11.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-4 ಮತ್ತು 8ರವರು ಪರಿಚಯ ಇರುತ್ತಾರೆ. ಈಗ ಸಾಕ್ಷಿಗೆ ನಿಪಿ-03ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ಚಾಸಾ 4 ರವರ ಮನೆಯ ಹತ್ತಿರ ದಿನಾಂಕ 12.01.2017 ರಂದು ಕರೆತಂದು ವಿಚಾರಣೆ ಮಾಡುವ ಸಮಯದಲ್ಲಿ ಸದರಿ ಸಹಿಯನ್ನು ಹಾಕಿರುತ್ತೇನೆ. ಸದರಿ ಪಂಚನಾಮೆಯ ಕಾಲದಲ್ಲಿ ನಾನು, ಚಾಸಾ 4 ಮತ್ತು 8 ರವರು ಹಾಜರು ಇದ್ದೆವು. ಆ ಸಮಯದಲ್ಲಿ ಪೋಲಿಸರು ಸುಟ್ಟಿರುವ ವೈಯರ್ ಅನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ಮುದ್ದೆಮಾಲನ್ನು ಚಾಸಾ 4 ರವರು ಪೋಲಿಸರಿಗೆ ಹಾಜರು ಪಡಿಸಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ಆರೋಪಿಯನ್ನು ವೀಡಿಯೋ ಕಾನ್ಫರೇನ್ಸ್ ಮುಖಾಂತರ ನೋಡಿ ಗುರುತಿಸಿರುತ್ತಾರೆ. ಜಪ್ತಿ ಪಡಿಸಿಕೊಂಡ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಸುಟ್ಟಿರುವ ಕೇಬಲ್

ವೈಯರ್ ಅನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಸದರಿ ವೈಯರ್ ಅನ್ನು ಈಗಾಗಲೆ ಮುದ್ದೆ ಮಾಲು 1 ಎಂದು ಗುರುತಿಸಲಾಗಿರುತ್ತದೆ. ಪೋಲಿಸರು ನಮ್ಮ ಹೇಳಿಕೆಯನ್ನು ಪಡೆದಿರುವುದಿಲ್ಲ ಸಾಕ್ಷಿಯಾಗಿ ಸಹಿ ಮಾಡಲು ಹೇಳಿದ್ದು ಸಹಿ ಮಾಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 12.01.2017 ರಂದು ಮಾಗಡಿ ಪೋಲಿಸರು ನಿಮ್ಮ ಗ್ರಾಮಕ್ಕೆ ಆರೋಪಿಗಳ ಜೊತೆ ಚಾಸಾ 4 ರವರ ಮನೆಯ ಹತ್ತಿರ ಬಂದು ನಿಮ್ಮನ್ನು ಮತ್ತು ಚಾಸಾ 8 ರವರನ್ನು ಕರೆದು ಆರೋಪಿಗಳನ್ನು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 05.01.2017ರ ರಾತ್ರಿ ವೇಳೆಯಲ್ಲಿ ಚಾಸ 1 ರವರ ಮಾವಿನ ತೋಟದ ಜಮೀನಿಗೆ ಆರೋಪಿಗಳು ಹೋಗಿ ಪಂಪ್ ಹೌಸ್ ಬಾಗಿಲು ಹೊಡೆದು ಒಳಗೆ ಹೋಗಿ ಸ್ಟಾಟರ್ ಗೆ ಅಳವಡಿಸಿದ್ದ ಕೇಬಲ್ ವೈಯರ್ ಅನ್ನು ಚಾಕುವಿನಿನಂದ ಕೊಯ್ದು ನಂತರ ಬೋರ್ ವೆಲ್ ಗೆ ಅಳವಡಿಸಿದ್ದ ಕೇಬಲ್ ವೈಯರ್ ಅನ್ನು ಚಾಕುವಿನಿಂದ ಕೊಯ್ದು ಕಳ್ಳತನ ಮಾಡಿಕೊಂಡು ಚಾಕುವನ್ನು ದಾರಿ ಮಧ್ಯೆ ಬಿಸಾಡಿ ಹುಣಸೆದೊಡ್ಡಿ ಬಳಿ ಇರುವ ಕಗ್ಗಲ್ಲಿಗೆ ತೆಗೆದುಕೊಂಡು ಹೋಗಿ ಬೆಂಕಿ ಹಾಕಿ ಸುಟ್ಟು ತಾಮ್ರದ ವೈಯರ್ ಅನ್ನು ಉಂಡೆ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ತಾಮ್ರದ ವೈಯರ್ ಅನ್ನು ಚಾಸಾ 4 ರವರಿಗೆ ಮಾರಾಟ ಮಾಡಿ ರೂ.2600/- ಹಣವನ್ನು ಪಡೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದುನುಡಿಯತ್ತಾರೆ. ಸದರಿ ತಾಮ್ರದ ವೈಯರ್ ಅನ್ನು ಅಮಾನತು ಪಡಿಸಿಕೊಳ್ಳಲು ಪಂಚರಾಗಿ ಬರಬೇಕೆಂದು ಕೋರಿದ್ದು ನೀವು ಒಪ್ಪಿ ನಿಮ್ಮಗಳ ಸಮಕ್ಷಮ ಆರೋಪಿಗಳು ಚಾಸಾ 4 ರವರ ಮನೆಯನ್ನು ತೋರಿಸಿದ್ದು ಹಾಗೂ ಚಾಸಾ 4 ರವರು ಆರೋಪಿಗಳನ್ನು ಗುರುತಿಸಿ ಇವರು ನನ್ನ ಬಳಿ ಬಂದು ನಮ್ಮ ಬಳಿ ಹಳೆ ವೇಸ್ಟ್ ಕೇಬಲ್ ಇತ್ತು ಸುಟ್ಟು ತಾಮ್ರದ ವೈಯರ್ ಅನ್ನು ಉಂಡೆ ಮಾಡಿ ತಂದಿದ್ದೇವೆ ಎಂದು ಸುಳ್ಳು ಹೇಳಿ ನನಗೆ ಮಾರಾಟ ಮಾಡಿ

ನನ್ನಿಂದ ರೂ. 2600/- ಹಣ ಪಡೆದುಕೊಂಡು ಹೋಗಿದ್ದರು ಎಂದು ತಿಳಿಸಿದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕಾಪರ್ ವೈಯರ್ ಸುಮಾರು 11 ಕೆ ಜಿ ತೂಕ ಇದ್ದ ಉಂಡೆಯನ್ನು ಮನೆಯಲ್ಲಿ ಇಟ್ಟಿದ್ದೇನೆ ಎಂದು ಚಾಸಾ 4 ರವರು ಪೋಲಿಸರಿಗೆ ಹಾಜರು ಪಡಿಸಿದಾಗ ಪೋಲಿಸರು ನಿಮ್ಮಗಳ ಸಮಕ್ಷಮ ಅಮಾನರು ಪಡಿಸಿಕೊಂಡು ಸಂಜೆ 4.00 ರಿಂದ 5.00 ಗಂಟೆಯವರೆಗೆ ಅಮಾನತು ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀಮತಿ ಕೆ ಹೆಚ್ ಪಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಮಹಜರ್ ಗೆ ಹಾಜರಾಗಲು ಪೋಲಿಸರು ನಿಮಗೆ ನೋಟೀಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯ ಕಾಲದಲ್ಲಿ ಮಂಚನಬೆಲೆ ಗ್ರಾಮಸ್ಥರು ಇದ್ದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಹಜರ್ ಬರೆದಿದ್ದರು ಎಂದರೆ ಸಾಕ್ಷಿ ಸಮಯ ಗೊತ್ತಿರುವುದಿಲ್ಲ ಆದರೆ ರಾತ್ರಿ ಆಗಿತ್ತು ಎಂದು ನುಡಿಯುತ್ತಾರೆ. ಮಹಜರ್ ಗೆ ಎಷ್ಟು ಜನ ಬಂದಿದ್ದರು ಹಾಗೂ ಅವರ ಹೆಸರು ಗೊತ್ತಿರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿರುತ್ತದೆಯೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಸ್ಥ,ಳದ ಚೆಕ್ಕುಬಂಧಿ ಗೊತ್ತೆ ಎಂದರೆ ಸಾಕ್ಷಿ ಗೊತ್ತು ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಮನೆ , ಉತ್ತರಕ್ಕೆ ಮನೆ ಹಾಗೂ ದಕ್ಷಿಣಕ್ಕೆ ಮನೆ ಇದೆ ಎಂದು ನುಡಿಯುತ್ತಾರೆ. ಮಹಜರ್ ಜರುಗಿಸಿದ ದಿನ ನೀವು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಹಾಗೂ ನೀವು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುಜವುದಿಲ್ಲ ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುದಿಲ್ಲ ಎಂದು ನುಡಿಯತ್ತಾರೆ. ಸದರಿ ಮುದ್ದೆ ಮಾಲು 1 ಅನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮುದ್ದೆಮಾಲು 1

ತರಹದ ವಸ್ತು ಮೆಕ್ಯಾನಿಕಲ್ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**